ಕಮಿಷನ್ ಅವರು ಮಾಡುತ್ತಿರುವುದರಿಂದ ಈಗ ಸಧ್ಯಕ್ಕೆ ಅವರು ನಮಗೆ ಡೈರೆಕ್ಷನನ್ನು ಕೊಟ್ಟಿದ್ದಾರೆ. ಯಾವ ರೀತಿಯಾಗಿಯೂ ಇದನ್ನು ಮಾಡಬಾರದೆಂದು ಹೇಳಿದ್ದಾರೆ. ಆ ವಿಂಗಡಣೆ ಕಾರ್ಯಕ್ರಮವಾದಮೇಲೆ ಸೆಂಟ್ರಲ್ ಎಲೆಕ್ಷನ್ ಕಮಿಷನ್ ಅವರು ನಮಗೆ ಪರ್ಮಿಷನನ್ನು ಕೊಟ್ಟಮೇಲೆ ಇಂಥ ಗ್ರಾಮಗಳನ್ನೆಲ್ಲಾ ನಾವು ಈ ಪಟ್ಟಣ ಪಂಚಾಯಿತಿಗೆ ಸೇರಿಸುತ್ತೇವೆಂದು ಹೇಳಿ ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಕಳೆದ ಐದು ತಿಂಗಳ ಹಿಂದೆ ಬೊಮ್ಮನಹಳ್ಳಿ ನಗರಸಭೆಗೆ ಎರಡು ಪಂಚಾಯಿತಿಗಳನ್ನು ಸೇರಿಸಿದ್ದೀರಿ. ಅದನ್ಯಾಕೆ ಸೇರಿಸಿದಿರಿ? ಆಗ ಡಿವಿಷನ್ ಮಾಡುವುದು ಇರಲಿಲ್ಲವೇ? ಲೋಕಸಭೆ ಮತ್ತು ವಿಧಾನಸಭೆಗಳನ್ನು ಡಿವಿಜನ್ ಮಾಡುತ್ತಿರುವುದು ಇರಲಿಲ್ಲವೇ? ಆಗಲೂ ಇತ್ತಲ್ಲ. ಸೇರಿಸಿದ್ದೀರಲ್ಲಾ ಅದು ಆಗಿ ಸುಮಾರು ಒಂದು ವರ್ಷದ ಮೇಲ್ಪಟ್ಟು ಆಯಿತು. ಡೀ-ಲಿಮಿಟೇಷನ್ ಮಾಡತಕ್ಕದ್ದು. ವಿಧಾನಸಭೆ ಮತ್ತು ಲೋಕಸಭೆಯದು ಆಯಿತಲ್ಲಾ ಈಗ ಐದು ತಿಂಗಳ ಹಿಂದೆ ಸೇರಿಸಿದ್ದೀರಲ್ಲಾ. ಈಗ ಹೊಸದಾಗಿ ಯಾವ ಕಾನೂನು ಬಂದುಬಿಡುತ್ತದೆ? ಅದೇ ಕಾನೂನಿನ ಪ್ರಕಾರ ಈ ಹಳ್ಳಿಗಳನ್ನು ಸೇರಿಸಿ ಎಂದು ನಾನು ತಮ್ಮಲ್ಲಿ ಪ್ರಾರ್ಥನೆಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಆರ್. ಮೋರೆ : ಮಾನ್ಯ ಅಧ್ಯಕ್ಷರೇ, ಆ ಗ್ರಾಮದ್ದಲ್ಲ ಅದು ಮುಂಚೆಯೇ ಡೀಲಿಮಿಟೇಷನ್ ಸರ್ಕ್ಯುಲರ್ ಬರುವ ಮುಂಚೆಯೇ ಅದನ್ನು ಕಳುಹಿಸಿರಬೇಕು. ಅದನ್ನು ನಾನು ಪರಿಶೀಲನೆ ಮಾಡುತ್ತೇನೆ. ಮತ್ತೆ ಈ ಡೀ-ಲಿಮಿಟೇಷನ್ ಮುಗಿಯುತ್ತದೆ. ಅದು ಮುಗಿದ ತಕ್ಷಣ ನಾವು ಅದನ್ನು ಪಟ್ಟಣಕ್ಕಾದರೂ ಸೇರಿಸುತ್ತೇವೆ. ಅಥವಾ ನಗರಸಭೆಗಾದರೂ ಅದನ್ನು ಸೇರಿಸುತ್ತೇನೆ.

ಶ್ರೀ ಆರ್. ಅಶೋಕ್ : ಅಷ್ಟರಲ್ಲಿ ಪಂಚಾಯಿತಿ ಚುನಾವಣೆ ನಡೆದುಬಿಡುತ್ತದಲ್ಲಾ ಆಮೇಲೆ ಹೇಗೆ ಸೇರಿಸುತ್ತೀರಿ?

ಶ್ರೀ ಎಸ್.ಆರ್. ಮೋರೆ : ಅದೇನೂ ಮಾಡುವುದಕ್ಕಾಗುವುದಿಲ್ಲ

ಶ್ರೀ ಆರ್. ಅಶೋಕ್ : ಆಮೇಲೆ ಛೇರ್ಮನ್‌ರು ಕೇಸ್ ಹಾಕುತ್ತಾರಲ್ಲಾ

ಅಧ್ಯಕ್ಷರು : ಆಯಿತು ಕುಳಿತುಕೊಳ್ಳಿ ಸ್ವಾಮಿ. ಒಂದು ಪ್ರಶ್ನೆಗೆ ಎಷ್ಟೊತ್ತು?

ಶ್ರೀ ಎಸ್.ಆರ್. ಮೋರೆ : ಮೊದಲೇ ಅವರು ನಮಗೆ ಒಂದು ಠರಾವನ್ನು ಪಾಸು ಮಾಡಿ ಕಳುಹಿಸಿ ಎಂದು ಹೇಳಿ.

ಶಿವಮೊಗ್ಗ ಜಿಲ್ಲೆಯಲ್ಲಿ ಸಣ್ಣ ಉಳಿತಾಯ ಏಜೆಂಟರ ಕಮೀಷನ್ ನೀಡುವಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಬಗ್ಗೆ.

82(1024) ಶ್ರೀ ಸಂಗಮೇಶ್ವರ ಬಿ.ಕೆ. (ಭದ್ರಾವತಿ) : ಮಾನ್ಯ ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೇಂದ್ರ ಸರ್ಕಾರದ ಸಣ್ಣ ಉಳಿತಾಯ ಯೋಜನೆಯಡಿ ಶಿವಮೊಗ್ಗ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕೃತ ಏಜೆಂಟರ ಸಂಖ್ಯೆ ಎಷ್ಟು;

ಆ) ಇದರಲ್ಲಿ ಮಹಿಳೆಯರ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ಇ) ಕಳೆದ ಮೂರು ವರ್ಷಗಳಲ್ಲಿ ಭದ್ರಾವತಿ ತಾಲ್ಲೂಕಿಗೆ ಸಂಬಂಧಿಸಿದಂತೆ, ಏಜೆಂಟರಿಗೆ ಕಮಿಷನ್ ಪಾವತಿಸಲು ಬಿಡುಗಡೆಯಾದ ಹಣವೆಷ್ಟು;

ಈ) ಏಜೆಂಟರಿಗೆ ಪಾವತಿಸಿದ ಕಮಿಷನ್/ಪ್ರೋತ್ಸಾಹ ಧನ ಎಷ್ಟು(ವಿವರ ನೀಡುವುದು);

ಉ) ಸಹಾಯಕ ನಿರ್ದೇಶಕರು ಸಣ್ಣ ಉಳಿತಾಯ ಭದ್ರಾವತಿ ರವರ ವಿರುದ್ಧ ಏಜೆಂಟರಿಗೆ ಕಮಿಷನ್/ಪ್ರೋತ್ಸಾಹ ಧನ ಪಾವತಿಸುವ ಸಂಬಂಧ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹಾಗಿದ್ದಲ್ಲಿ, ಸರ್ಕಾರದ ಕ್ರಮಗಳೇನು?

ಶ್ರೀ ಬಸವರಾಜ್ ಎಸ್. ಹೊರಟ್ಟಿ (ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

ಅ) 2669

ಆ) ಎಂ.ಪಿ.ಕೆ.ಬಿ.ವೈ. ಯೋಜನೆಯಡಿಯಲ್ಲಿ ತಾಲ್ಲೂಕುವಾರು ಮಹಿಳಾ ಏಜೆಂಟರ ವಿವರ ಕೆಳಕಂಡಂತೆ ಇದೆ.

ಶಿವಮೊಗ್ಗ	608
ಭದ್ರಾವತಿ	380
ಸಾಗರ	182
ತೀರ್ಥಹಳ್ಳಿ	86
ಹೊಸನಗರ	56
ಶಿಕಾರಿಪುರ	182
ಸೊರಬ	54
ಒಟ್ಟು	1548

ಇ) ಏಜೆಂಟರುಗಳಿಗೆ ಪ್ರೋತ್ಸಾಹ ಧನ ಪಾವತಿಸಲಾಗುತ್ತದೆ. ಅವರಿಗೆ ಕಮಿಷನ್ ನೀಡುವುದಿಲ್ಲ.

ಈ) ಭದ್ರಾವತಿಯಲ್ಲಿನ ಏಜೆಂಟರಿಗೆ ಪ್ರೋತ್ಸಾಹ ಧನವನ್ನು ಕಳೆದ ಮೂರು ಸಾಲುಗಳಲ್ಲಿ ಪಾವತಿಸಿದ ವಿವರ ಈ ಕೆಳಕಂಡಂತಿದೆ.

ಸಾಲು	ಕ್ಲೈಂಗಳ ಸಂಖ್ಯೆ	ಮೊತ್ತ
2000–2001	324	44.95 ಲಕ್ಷಗಳು
2001–2002	332	69.52 ಲಕ್ಷಗಳು
2002–2003	184	4052 ಲಕ್ಷಗಳು

(ಡಿಸೆಂಬರ್ 2004ರವರೆಗೆ ಪಾವತಿಸುವಂತೆ)

ಉ) ಭದ್ರಾವತಿಯಲ್ಲಿ ಸಣ್ಣ ಉಳಿತಾಯ ಸಹಾಯಕ ನಿರ್ದೇಶಕರ ಹುದ್ದೆ ಇರುವುದಿಲ್ಲ. ಆದರೆ ಅಲ್ಲಿ ಅಭಿವೃದ್ಧಿ ಅಧಿಕಾರಿ ಹುದ್ದೆ ಇದೆ. ಆ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ಮೇಲೆ ದೂರು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಊ) ಈ ಅಭಿವೃದ್ಧಿ ಅಧಿಕಾರಿ ಮೇಲಿನ ದೂರಿನ ಬಗ್ಗೆ ತನಿಖೆ ನಡೆಸಲಾಗಿದೆ. ತನಿಖಾ ವರದಿಯ ಆಧಾರದ ಮೇಲೆ ಸದರೀ ನೌಕರರನ್ನು ಭದ್ರಾವತಿಯಿಂದ ವರ್ಗಾವಣೆ ಮಾಡಲಾಗಿದೆ.

ಶ್ರೀ ಬಿ.ಕೆ. ಸಂಗಮೇಶ್ವರ್ : ಮಾನ್ಯ ಅಧ್ಯಕ್ಷರೇ, ಇದರಲ್ಲಿ ಕೆಲವು ವಿಚಾರಗಳಲ್ಲಿ ನನಗೆ ಸರಿಯಾಗಿ ಮಾಹಿತಿ ಸಿಕ್ಕಿಲ್ಲ. ಇಲ್ಲಿ ಭ್ರಷ್ಟಾಚಾರ ಮಾಡಿದ್ದಾರೆಂದು ಹಲವಾರು ದೂರುಗಳನ್ನು ಮಾನ್ಯ ಸಚಿವರಿಗೆ ಕೊಟ್ಟಿದ್ದೇವೆ. ಆದರೆ ಅವರು ಇದರ ಮೇಲೆ ಯಾವುದೇ ಒಂದು ಕ್ರಮವನ್ನು ಜರುಗಿಸಿಲ್ಲ. ದಯಮಾಡಿ ಅದನ್ನು ಪರಿಶೀಲಿಸಬೇಕಾಗಿ ಕೋರುತ್ತೇನೆ.

ಶ್ರೀ ಬಸವರಾಜ್. ಎಸ್. ಹೊರಟ್ಟಿ (ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) : ಮಾನ್ಯ ಅಧ್ಯಕ್ಷರೇ ಮಾನ್ಯ ಶಾಸಕರಿಂದ ಮತ್ತು ಸಾರ್ವಜನಿಕರಿಂದ ಸಾಕಷ್ಟು ದೂರುಗಳು ಸಂಬಂಧಪಟ್ಟ ಅಧಿಕಾರಿಯ ಮೇಲೆ ಬಂದಿದ್ದವು. ಅದು ಬಂದ ತಕ್ಷಣ ಅವರನ್ನು ಅಲ್ಲಿಂದ ವರ್ಗಾವಣೆ ಮಾಡಲಾಗಿದೆ. ಮತ್ತು ವಿಚಾರಣೆಗೆ ಈಗಾಗಲೇ ಆದೇಶವನ್ನು ಮಾಡಿದ್ದೇನೆ. ವಿಚಾರಣೆ ಮಾಡಿದ ನಂತರ ಅವರು ತಪ್ಪಿತಸ್ಥ ಆದರೆ ಅವರಮೇಲೆ ಖಂಡಿತವಾಗಿಯೂ ಕ್ರಮ ತೆಗೆದುಕೊಳ್ಳುವ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆ.

ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು: ಮಾನ್ಯ ಅಧ್ಯಕ್ಷರೇ, ದಿನಾಂಕ: 31–01–2005 ರ 5ನೇ ಪಟ್ಟಿಯ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 13 ಉತ್ತರಗಳನ್ನು ಮತ್ತು ತಡೆಹಿಡಿಯಲಾದ 4 ಪ್ರಶ್ನೆಗಳ ಪೈಕಿ 4 ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 228 ಪ್ರಶ್ನೆಗಳ ಪೈಕಿ 170 ಪ್ರಶ್ನೆಗಳಿಗೆ ಉತ್ತರಗಳನ್ನು ದಿನಾಂಕ: 01–02–2005 ರಂದು ಸದನದಲ್ಲಿ ಮಂಡಿಸುತ್ತಿದ್ದೇನೆ. ಹಾಗೂ ದಿನಾಂಕ: 01–02–2005 ರ 6ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 210 ಪ್ರಶ್ನೆಗಳ ಪೈಕಿ 168 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

4. ಚುನಾವಣಾ ಪ್ರಸ್ತಾವ

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ತಮ್ಮ ಪರವಾನಿಗೆಯನ್ನು ಪಡೆದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವ್ಯವಸ್ಥಾಪನಾ ಮಂಡಳಿಗೆ ಚುನಾವಣೆಯ ಪ್ರಸ್ತಾಪ. ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವನಾಗಿ ಈಗಾಗಲೇ ದಿನಾಂಕ: 24–01–2005 ರಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವ್ಯವಸ್ಥಾಪನಾ ಮಂಡಳಿಗೆ ಚುನಾವಣೆಯ ಪ್ರಸ್ತಾವವನ್ನು ಮಂಡಿಸಿದ್ದು, ಚುನಾವಣಾ ಕಾರ್ಯಕ್ರಮ, ವೇಳಾಪಟ್ಟಿಯನ್ನು ಹೊರಡಿಸಲಾಗಿರುತ್ತದೆ. ಅದರಂತೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವ್ಯವಸ್ಥಾಪನಾ ಮಂಡಳಿಗೆ ಇಬ್ಬರು ವಿಧಾನಸಭೆಯ ಸದಸ್ಯರನ್ನು ನಾಮನಿರ್ದೇಶನ ಮಾಡಲು ಈ ಸದನವು ಮಾನ್ಯ ಸಭಾಧ್ಯಕ್ಷರಿಗೆ ಅಧಿಕಾರವನ್ನು ನೀಡಬೇಕೆಂದು ಕೋರುತ್ತೇನೆ.

(ಸದನವು ಸನ್ಮಾನ್ಯ ಸಭಾಧ್ಯಕ್ಷರಿಗೆ ನಾಮ ನಿರ್ದೇಶನ ಮಾಡುವ ಅಧಿಕಾರ ನೀಡಿತು)

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ಪ್ರಿವಿಲೇಜ್ ಮೋಷನ್ ಬಗ್ಗೆ ಮೂವ್ ಮಾಡುವುದಕ್ಕೆ ಅವಕಾಶವನ್ನು ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಪ್ರಶ್ನೋತ್ತರ ಮುಗಿದ ನಂತರ ಆಲಮಟ್ಟಿಯ ಬಗ್ಗೆ ತೆಗೆದುಕೊಳ್ಳುತ್ತೇನೆಂದು ತಾವು ಹೇಳಿದ್ದೀರಿ.